**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.29.01.2024**

## ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎ ಎಮ್ ಕೆ ವಕೀಲರಿಂದಃ

1. ನಾನು 10 ನೇ ತರಗತಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾವು ಒಟ್ಟು 5 ಜನ ಸಹೋದರರು. ಎಲ್ಲರೂ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ಆ ರೀತಿ 6-7 ವರ್ಷಗಳ ಹಿಂದೆ ಪ್ರತ್ಯೇಕವಾಗಿ ವಾಸವಾಗಿರುತ್ತೇವೆ. ಇದಕ್ಕೆ ಸಂಬಂದಿಸಿದಂತೆ ನಾವು ಯಾವುದೇ ವಿಭಾಗ ಪತ್ರ ಮಾಡಿಕೊಂಡಿರುವುದಿಲ್ಲ. ನಾನು ಮತ್ತು ನನ್ನ ಸಹೋದರರು ಇಂದಿಗೂ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ನಾರಾಯಣಪ್ಪ ಎಂಬುವವರು ಬರೆದು ಕೊಟ್ಟ ಪತ್ರದ ಆಧಾರದ ಮೇಲೆ ಹಾಕಿರುತ್ತೇನೆ. ಪ್ರತಿವಾದಿಗಳು ನಮಗೆ ತೊಂದರೆ ಕೊಟ್ಟ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರವನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ.

2. 1977 ರಲ್ಲಿ ನನಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎಂದರೆ ನನಗೆ ಈಗ 73 ವರ್ಷ ವಯಸ್ಸು ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ನನಗೆ 56 ವರ್ಷ ಎಂದು ತಿಳಿಸಿದ್ದೇನೆ ಎಂದರೆ ಸರಿ. ನಿಪಿ-22 ಆಗುವ ಕಾಲಕ್ಕೆ ನನಗೆ ಎಷ್ಟು ವರ್ಷ ವಯಸ್ಸು ಆಗಿತ್ತು ಎಂದು ಹೇಳಲು ಆಗುವುದಿಲ್ಲ. ಆ ರೀತಿ ನಿಪಿ-22 ಆಗುವಾಗ ವಾದ ಪತ್ರದ ವಯಸ್ಸಿನಂತೆ ನಾನು ಅಪ್ರಾಪ್ತನಾಗಿದ್ದೆ ಎಂದರೆ ಸರಿಯಲ್ಲ. ವಾದ ಪತ್ರದಲ್ಲಿ ತಿಳಿಸಿರುವ ನನ್ನ ವಯಸ್ಸು ಸರಿಯಾಗಿರುತ್ತದೆ. ನಿಪಿ-22 ರಲ್ಲಿರುವ ಚೆಕ್ಕುಬಂದಿಗೂ ವಾದ ಪತ್ರದಲ್ಲಿರುವ ಚೆಕ್ಕುಬಂದಿಗೂ ವ್ಯತ್ಯಾಸವಿದೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ-ಪ್ರತಿವಾದಿ 1 ರವರ ಆಸ್ತಿ, ಪಶ್ಚಿಮಕ್ಕೆ-ಚಿಕ್ಕಕೆಂಪಣ್ಣ ಮತ್ತು ಚಿಕ್ಕಪಿಳ್ಳಪ್ಪ ನವರ ಆಸ್ತಿ, ಉತ್ತರಕ್ಕೆ-ಕೆಂಪಣ್ಣ ಪೂಜಪ್ಪ ರವರ ಜಮೀನು, ದಕ್ಷಿಣಕ್ಕೆ-ಚೆನ್ನರಾಯಪಟ್ಟಣ ರಾಮಣ್ಣ ರವರ ಜಮೀನು. ಆ ಕಾರಣದಿಂದ ವಾದ ಪತ್ರಕ್ಕೂ ನಿಪಿ-22 ರಲ್ಲಿರುವ ಚೆಕ್ಕುಬಂದಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಕ್ರಯ ಆದ ನಂತರ ರಸ್ತೆ ಆಗಿದೆ ಎಂದು ನುಡಿಯುತ್ತಾರೆ. ಈ ಬಗ್ಗೆ ಸರ್ವೆ ದಾಖಲೆಗಳು ಇರುವುದಿಲ್ಲ. ನಿಪಿ-22 ರಲ್ಲಿ ರಸ್ತೆ ಎಂಬುದಾಗಿ ಉಲ್ಲೇಖ ಇರುವುದಿಲ್ಲ ಎಂದರೆ ಸರಿ.

3. ಸರ್ವೆ ನಂ.33 ಮೂಲತಃ ಗೋಮಾಳ ಜಮೀನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನನ್ನ ಮಾರಾಟಗಾರರಿಗೆ ದಾವಾ ಆಸ್ತಿ ಹೇಗೆ ಬಂತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯನ್ನು ಖರೀದಿಸುವ ಸಂದರ್ಬದಲ್ಲಿ ಪಹಣಿಯನ್ನು ನೋಡಿ ಖರೀದಿಸಿರುತ್ತೇನೆ. ಇದನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಮಾರಾಟಗಾರರಾದ ನಾರಾಯಣಪ್ಪನವರಿಗೆ ದಾವಾ ಆಸ್ತಿಯನ್ನು 15 ವರ್ಷಗಳ ಕಾಲ ಪರಭಾರೆ

ಮಾಡಬಾರದು ಎಂಬ ಷರುತ್ತು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ಷರತ್ತು ಇದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ನಿಪಿ-22 ನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**